# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀ.ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 275 (119) |
| ಉತ್ತರಿಸಬೇಕಾದ ದಿನಾಂಕ | 13-09-2022 |
| ಉತ್ತರಿಸಬೇಕಾದವರು | ನಗರಾಭಿವೃದ್ಧಿ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬಳ್ಳಾರಿ ಜಿಲ್ಲೆಯ ಬಳ್ಳಾರಿ ನಗರಸಭೆ ವ್ಯಾಪ್ತಿಯಲ್ಲಿ ಕೈಗೆತ್ತಿಕೊಂಡಿರುವ ಯುಜಿಡಿ ಕಾಮಗಾರಿಯು ಸಂಪೂರ್ಣವಾಗಿ ಅನುಷ್ಠಾನಗೊಂಡಿದೆಯೇ; ಹಾಗಿದ್ದಲ್ಲಿ, ಅನುಷ್ಠಾನಗೊಂಡಿದ್ದು, ಯಾವಾಗ; ಅನುಷ್ಠಾನಗೊಳ್ಳದಿದ್ದಲ್ಲಿ, ವಿಳಂಬಕ್ಕೆ ಕಾರಣಗಳೇನು; ಪ್ರಗತಿಯಲ್ಲಿರುವ ಕಾಮಗಾರಿಗಳ ಸಂಖ್ಯೆ ಎಷ್ಟು; ಸದರಿ ಕಾಮಗಾರಿಗಳ ಪ್ರಗತಿ ಕಾರ್ಯ ಯಾವ ಹಂತದಲ್ಲಿದೆ; (ಕಾಮಗಾರಿವಾರು ಕಾರಣ ಸಹಿತ ವಿವರ ನೀಡುವುದು) | ಬಳ್ಳಾರಿ ನಗರಕ್ಕೆ ಕೇಂದ್ರ ಪುರಸ್ಕೃತ ಅಮೃತ್ ಯೋಜನೆಯಡಿ ಒಳಚರಂಡಿ ಯೋಜನೆಯಡಿಯಲ್ಲಿ ಎರಡು ಕಾಮಗಾರಿಗಳು ಮಂಜೂರಾಗಿದ್ದು, ಸದರಿ ಕಾಮಗಾರಿಗಳು ಈ ಕೆಳಗಿನಂತಿವೆ.<br>1) ಅಮೃತ್ ಯೋಜನೆಯಡಿ ಒಳಚರಂಡಿ ಕಾಮಗಾರಿಯನ್ನು ರೂ.8775.00 ಲಕ್ಷಗಳಿಗೆ ಕೈಗೊಂಡಿದ್ದು, ದಿನಾಂಕ: 31-03-2021 ರಂದು ಪೂರ್ಣಗೊಳಿಸಿ, ಚಾಲನೆಗೊಳಿಸಲಾಗಿದೆ.<br>2) ಅಮೃತ್ ಯೋಜನೆಯಡಿ ಹೆಚ್ಚುವರಿ ಅನುದಾನದಡಿ ಒಳಚರಂಡಿ ಕಾಮಗಾರಿಯನ್ನು ರೂ.2069.00 ಲಕ್ಷಗಳಿಗೆ ಕೈಗೊಂಡಿದ್ದು, ಸ್ಥಳೀಯ ಸಂಸ್ಥೆಯಿಂದ 2.00 ಎಂ.ಎಲ್.ಡಿ. ಸಾಮರ್ಥ್ಯದ ಮಲೀನ ನೀರು ಸಂಸ್ಕರಣಾ ಘಟಕ ಮತ್ತು ತೇವಭಾವಿ ನಿರ್ಮಾಣದ ಸ್ಥಳ ಹಸ್ತಾಂತರಿಸುವಲ್ಲಿ ವಿಳಂಬವಾಗಿರುತ್ತದೆ. ಪ್ರಸ್ತುತ 2 ಎಂ.ಎಲ್.ಡಿ. ಸಾಮರ್ಥ್ಯದ ಮಲೀನ ನೀರು ಸಂಸ್ಕರಣಾ ಘಟಕ ಮತ್ತು ತೇವಭಾವಿಗಳ ಸಿವಿಲ್ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಎಲೆಕ್ಟ್ರೋ ಮೆಕಾನಿಕಲ್ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಇದುವರೆವಿಗೂ ಸುಮಾರು 90% ರಷ್ಟು ಕಾಮಗಾರಿ ಪೂರ್ಣಗೊಂಡಿರುತ್ತದೆ. |
| ಆ) | ಈ ಕಾಮಗಾರಿಗಳ ಒಟ್ಟು ಅಂದಾಜು ಮೊತ್ತವೆಷ್ಟು; ಆ ಪೈಕಿ ಇದುವರೆಗೂ ಬಿಡುಗಡೆಯಾದ ಅನುದಾನವೆಷ್ಟು; ಖರ್ಚಾದ ಹಣವೆಷ್ಟು? (ವಿವರ ನೀಡುವುದು) | • ಕೇಂದ್ರ ಪುರಸ್ಕೃತ ಅಮೃತ್ ಯೋಜನೆಯಡಿ ಬಳ್ಳಾರಿ ನಗರಕ್ಕೆ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಕಾಮಗಾರಿಯು ಅಂದಾಜು ಮೊತ್ತ ರೂ.8775.00 ಲಕ್ಷಗಳಿಗೆ ಅನುಮೋದನೆಗೊಂಡಿದ್ದು, ಈವರೆವಿಗೂ ರೂ.8775.00 ಲಕ್ಷಗಳು ಬಿಡುಗಡೆಯಾಗಿರುತ್ತದೆ. ಸದರಿ ಯೋಜನೆಗೆ ರೂ.9720.00 ಲಕ್ಷಗಳು ವೆಚ್ಚವಾಗಿರುತ್ತದೆ.<br>• ಕೇಂದ್ರ ಪುರಸ್ಕೃತ ಅಮೃತ್ ಹೆಚ್ಚುವರಿ ಅನುದಾನದಡಿ ಬಳ್ಳಾರಿ ನಗರದ ವಲಯ-1 ಮತ್ತು ವಲಯ-4ರಲ್ಲಿ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಕಾಮಗಾರಿಯು ಅಂದಾಜು ಮೊತ್ತ ರೂ.2069.00 ಲಕ್ಷಗಳಿಗೆ ಅನುಮೋದನೆಗೊಂಡಿದ್ದು, ಈವರೆವಿಗೂ ರೂ.1656.00 ಲಕ್ಷಗಳು ಬಿಡುಗಡೆಯಾಗಿರುತ್ತದೆ. ಸದರಿ ಯೋಜನೆಗೆ ರೂ.1149.00 ಲಕ್ಷಗಳು ವೆಚ್ಚವಾಗಿರುತ್ತದೆ. |

ಸಂಖ್ಯೆ: ನಅಇ 127 ಯುಎಂಎಸ್ 2022

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು